ಅರ್ಥಾತ್ – ಉಣ್ಣಲು ಆಹಾರ ಹುಡುಕುವುದಕ್ಕೆ ಕೆಲಸ ಮಾಡಬೇಕು. ಮತ್ತು ಬದುಕುಳಿದು ವಂಶವೃದ್ಧಿಗೆ ಹಮ್ಮು ಮತ್ತು ಅನವಶ್ಯಕ ಅಲಂಕಾರಗಳು ಬೇಕು. ಸಹಜವಾಗಿಯೇ ಈ ಗುಣ ನವಿಲುಗಳಲ್ಲಿರುವುದರಿಂದ ಅವುಗಳಿಗೆ ಈ ಹಮ್ಮಿಗಾಗಿ ಹೆಚ್ಚಿನ ಕೆಲಸ ಕೈಗೊಳ್ಳುವ ಅವಶ್ಯಕತೆಯಿಲ್ಲ. ಆದರೆ, ಮಾನವ? (ಸುಂದರವಾಗಿ ಕಂಡ ನವಿಲುಗಳನ್ನೇ ಮೈಥುನಕ್ಕೆ ಆರಿಸಿಕೊಂಡದ್ದರ ಬಗ್ಗೆ ಯಾವುದೇ ತಥ್ಯವಿಲ್ಲ ಎಂದು ಮತ್ತೊಂದು ಅಧ್ಯಯನ ನಿರೂಪಿಸಿತ್ತೆಂದು ಸುಜ್‌ಮನ್ ಉಲ್ಲೇಖಿಸುತ್ತಾರೆ. ಆ ಚರ್ಚೆ ಇಲ್ಲಿ ಪ್ರಸ್ತುತವಲ್ಲ.)

ಆಹಾರಕ್ಕಾಗಿ ಪರದಾಡಿದ ನಂತರ ತೃಪ್ತ ಹೊಟ್ಟೆಯಲ್ಲಿ ವಿರಾಮಕಾಲವನ್ನು ಕಳೆಯುವುದು ಕಲೆ ಮತ್ತು ಸಂಸ್ಕೃತಿಗಳಿಗೆ ನಾಂದಿಹಾಡಿತು. ಕೈಯಿಂದ ಪ್ರಯೋಗಿಸುವ ಉಪಕರಣಗಳು – ಮುಖ್ಯವಾಗಿ ಸಣ್ಣ ಕೊಡಲಿಯನ್ನು ಮಾನವಕುಲ ಉಪಯೋಗಿಸುತ್ತಿದ್ದ ಸಂಕೇತ ನಮಗೆ ಸುಮಾರು 35,000 ವರ್ಷಗಳ ಹಿಂದೆಯೇ ದೊರೆಯುತ್ತದೆ. ಆಹಾರ ಸಂಗ್ರಹ ಸುಗಮವಾಗಿರಲು ಈ ಕೊಡಲಿಯನ್ನು ರೂಪಿಸಿದ್ದೇ ಆದರೆ ಅದರ ಮೇಲಿರಬಹುದಾದ ಚಿತ್ತಾರ, ಅಥವಾ ಬಂಡೆಗಳ ಮೇಲಿರುವ ಕಲೆ ಏನನ್ನು ಸೂಚಿಸುತ್ತವೆ? ಮೊದಲಿನಿಂದಲೂ ಮಾನವನ ಜೀವನದಲ್ಲಿ ಕೆಲಸಕ್ಕಿಂತ ಮಿಗಿಲಾದದ್ದು ಇದ್ದೇ ಇತ್ತು. ಆ ಮಿಗಿಲಾದ ಚಟುವಟಿಕೆ ವಿರಾಮ ಕಾಲದಿಂದ ಬಂದದ್ದು.

ಈ ಕೆಲಸ ಮತ್ತು ವಿರಾಮದ ಚರ್ಚೆಯ ಸಂದರ್ಭದಲ್ಲಿ ಮರುವಿತರಣೆಯ ಮಾತೂ ಬರುತ್ತದೆ. ಸಮುದಾಯದಲ್ಲಿರುವವರೆಲ್ಲರೂ ಆಹಾರ ಸಂಗ್ರಹ ಮಾಡಲು ಸಾಧ್ಯವಿಲ್ಲ. ಕೆಲವರಿಗೆ ಕೈಲಾಗೋದಿಲ್ಲ. ಆರೋಗ್ಯ ಹದಗೆಟ್ಟಿರಬಹುದು. ಈ ಸಂದರ್ಭದಲ್ಲಿ ನಿಕಲಾಸ್ ಪೀಟರ್ಸನ್ ಸೂಚಿಸಿದ "ಬೇಡಿಕೆಯ ವಿತರಣೆ"ಯ ಸೂತ್ರವನ್ನು ಸುಜ್‌ಮನ್ ಉಲ್ಲೇಖಿಸುತ್ತಾರೆ. ಯಾರಿಗಾದರೂ ಏನಾದರೂ ಬೇಕಿದ್ದರೆ, ಕೈಲಾದವರು ತಂದುಕೊಡುವುದನ್ನು, ಹಂಚಿಕೊಳ್ಳುವುದನ್ನು ಹೀಗೆ ಪರಿಭಾಷಿಸಿದ್ದಾರೆ. ಮಾನವಶಾಸ್ತ್ರಜ್ಞೆ ನ್ಯೂರಿಟ್ ಬರ್ಡ್ ಡೇವಿಡ್ ಕೂಡಾ ನೀಲಗಿರಿ ಪ್ರಾಂತದಲ್ಲಿ ನಡೆಸಿದ ನಾಯಕ ಬುಡಕಟ್ಟಿನ ಅಧ್ಯಯನದಲ್ಲೂ ಈ ರೀತಿಯ ಒಳನೋಟಗಳನ್ನು ಕಂಡಿದ್ದಾರೆ. ಆಕೆ ಇದಕ್ಕೆ "ಹಂಚಿಕೊಳ್ಳುವ ಸಂಸ್ಕೃತಿ" ಎನ್ನುವ ಪರಿಭಾಷೆಯನ್ನು ಕೊಟ್ಟಿದ್ದಾರೆ. ಆಧುನಿಕ ಸಮಾಜಕ್ಕೆ ಒಗ್ಗುವುದು ನಿಕಲಸ್ ಬ್ಲರ್ಟನ್-ಜೋನ್ಸ್ ಕೊಟ್ಟ– ಸಹಿಸುವ ತುಡುಗು – ಎನ್ನುವ ಪರಿಭಾಷೆ. ಇದ್ದವರಿಂದ ಕಸಿದು ಇಲ್ಲದವರಿಗೆ ಕೊಡುವುದೇ ತೆರಿಗೆ. ತೆರಿಗೆಗೆ "ಸಹಿಸುವ ತುಡುಗಿ"ಗಿಂತ ಉತ್ತಮವಾದ ಪ್ರಯೋಗ – "ಒಮ್ಮತದಿಂದ ಹೊಮ್ಮಿದ ಆಜ್ಞಾ ಹಂಚಿಕೆ" – ಎನ್ನುವುದು ಸಮರ್ಪಕವೆಂದು ಸುಜ್‌ಮನ್ ಹೇಳುತ್ತಾರೆ. ಹಂಚಿಕೊಳ್ಳುವ ಮಾತಿಗೆ ಜು–ಹೊನಾಸಿ ಬುಡಕಟ್ಟಿನ ಕೆಲವು ರಿವಾಜುಗಳನ್ನು ಪುಸ್ತಕದಲ್ಲಿ ಚರ್ಚಿಸಲಾಗಿದೆ. ಕಾಡಿನಲ್ಲಿ ಬೇಟೆಯಾಡಿ ಮಾಂಸವನ್ನು ತಂದಾಗ ಆ ಮಾಂಸದ ಗುಣಗಾನ ಮಾಡುವುದಕ್ಕಿಂತ ಅದರಲ್ಲಿರಬಹುದಾದ ಹುಳುಕುಗಳನ್ನು ಹುಡುಕುವುದೇ ರಿವಾಜು. ಇದರಿಂದ ಬೇಟೆಯಾಡಿದವನಿಗೆ ತಾನೇ ಅತ್ಯುತ್ತಮ ಬೇಟೆಗಾರ ಎನ್ನುವ ಅಹಂ ಬೆಳೆಯದಂತೆ ಕಾಪಾಡಬಹುದು. ಜೊತೆಗೆ ಮಾಂಸವನ್ನು ವಿತರಿಸುವ ಅಧಿಕಾರವಿರುವುದು ಬೇಟೆಯಾಡಿದ ವ್ಯಕ್ತಿಗಲ್ಲ. ಯಾರ ಬಾಣದಿಂದ ಆ ಪ್ರಾಣಿ ಬಲಿಯಾಯಿತೋ ಅವರಿಗೆ ಆ ಅಧಿಕಾರ ಸಲ್ಲುತ್ತದೆ. ಬೇಟೆಯಾಡುವವನು ಬೇರೊಬ್ಬರ ಬಾಣವನ್ನು ಎರವಲು ಪಡೆದಿದ್ದರೆ ಆ ಅಧಿಕಾರ ಬಾಣವನ್ನು ಕೊಟ್ಟ ವ್ಯಕ್ತಿಗೆ ಹೋಗುತ್ತದೆಯೇ ಹೊರತು, ಬಾಣ ಪ್ರಯೋಗಿಸಿದವರಿಗಲ್ಲ...

ಕೆಲಸ ಮತ್ತು ವಿರಾಮದ ಮಾತು ಬಂದಾಗ ಸೋಮಾರಿತನದ ಮಾತೂ ಸಹಜವಾಗಿಯೇ ಬರುತ್ತದೆ. ವಿರಾಮಕ್ಕೂ ಸೋಮಾರಿತನಕ್ಕೂ ನಡುವೆ ಎಳೆಯುವ ಗೆರೆ ತುಂಬಾ ತೆಳುವಾದದ್ದು. ಮರುಹಂಚಿಕೆಯ ಸಂದರ್ಭದಲ್ಲಿ ಬಂಡವಾಳಶಾಹಿಗಳು ಬಡವರನ್ನು ಸೋಮಾರಿಗಳೆಂದು ಕರೆದರೆ, ಸಮಾಜವಾದಿಗಳು ಶ್ರೀಮಂತರನ್ನು ಸೋಮಾರಿಗಳೆನ್ನುತ್ತಾರೆ. ಇತ್ತೀಚೆಗೆ ಬಂಡವಾಳಶಾಹಿ ಉದ್ಯಮಿಯೊಬ್ಬರು ತಮ್ಮ ಯಶಸ್ಸಿನ ಗುಟ್ಟನ್ನು 'ಮೆಹನತ್ ಮೆಹನತ್ ಮೆಹನತ್' ಎಂದು ಹೇಳಿದರು. ಆದರೆ, ಬಂಡವಾಳವಿಟ್ಟು ಅದರ ಮೇಲೆ ಸಂಪಾದಿಸುವವರ ಮೆಹನತ್ ಏನು? ಅವರ ಇಡೀ ಸಮಯ ಕಾರ್ಮಿಕರ ಕೈಯಲ್ಲಿ ಮೆಹನತ್ ಮಾಡಿಸುವುದೇ ಅಲ್ಲವೇ? ಹೀಗಾಗಿ ಅವರನ್ನು ಆಲಸಿಗಳೆಂದು ಕಾರ್ಮಿಕರು ಬಣ್ಣಿಸುವುದರಲ್ಲಿ ಅರ್ಥವಿರಬಹುದು.